**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 07.01.2026**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.**

**ಪಾಟೀ ಸವಾಲುಃ ಎಲ್ ಎ ಡಿ ಸಿ ವಕೀಲರಿಂದಃ**

1. ಆರೋಪಿ ಮತ್ತು ಮಾಲು ಪತ್ತೆ ಮಾಡಲು ನನ್ನ ಮೇಲಾಧಿಕಾರಿಗಳು ನಗನೆ ಲಿಖಿತ ಆದೇಶ ಮಾಡಿಲ್ಲ. ಯಾವ ಯಾವ ಮಾಲುಗಳನ್ನು ಪತ್ತೇ ಮಾಡಬೇಕೆಂದು ನಿಮ್ಮ ಹಿರಿಯ ಅಧಿಕಾರಿಗಳು ನಿಮಗೆ ಲಿಖಿತ ಆದೇಶ ನೀಡಿದ್ದರು ಎಂದರೆ ಸಾಕ್ಷಿ ನೀಡಿರಲಿಲ್ಲ ಎಂದು ಹೇಳುತ್ತಾರೆ. ಆರೋಪಿ ಪತ್ತೇಗಾಗಿ ಹಿರಿಯ ಅಧಿಕಾರಿಗಳು ಆರೋಪಿಯ ಚಹರೆಗಳನ್ನು ನೀಡಿರಲಿಲ್ಲ. ನಾನು ಮತ್ತು ಇತರ 8 ಸಿಬ್ಬಂದಿಗಳು ನಮ್ಮ ಸ್ವಂತ ದ್ವಿಚಕ್ರ ವಾಹನದಲ್ಲಿ ಪತ್ತೆ ಕಾರ್ಯಕ್ಕಾಗಿ ಹೋದೆನು. ವಾಹನಗಳನ್ನು ಒಂದು ಕಡೆ ನಿಲ್ಲಿಸಿ ಒಟ್ಟಿಗೆ ಗಸ್ತು ಕಾರ್ಯ ಮಾಡುತ್ತಿದ್ದೆವು. ಲಷ್ಕರ್ ಮೊಹಲ್ಲಾ ಮತ್ತು ಮಂಡಿ ಮೊಹಲ್ಲಾ ಗಳ ನಡುವೆ ಎಷ್ಟು ಅಂತರ ಇದೆ ಎಂದರೆ ಸಾಕ್ಷಿ ಅವುಗಳ ಅಕ್ಕಪಕ್ಕದಲ್ಲಿ ಇವೆ ಎಂದು ಹೇಳುತ್ತಾರೆ. ಲಷ್ಕರ್ ಮೊಹಲ್ಲಾ ಮತ್ತು ಮಂಡಿ ಮೊಹಲ್ಲಾ, ಟೆರೇಸಿಯನ್ ಕಾಲೇಜು ಬಳಿ ಗಸ್ತು ಮಾಡಲು ತಲಾ ಮೂರು ಗಂಟೆ ತೆಗೆದುಕೊಂಡೆವು. ಸ್ಥಳಕ್ಕೆ ಪಂಚರನ್ನು ಚಾಸಾ. 19 ರವರು ಕರೆಸಿದರು. ಪಂಚರಿಗೆ ನೋಟೀಸ್ ನೀಡಿರಲಿಲ್ಲ.

*2. ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿರಲಿಲ್ಲ. ಆರೋಪಿಗಳು ಮಾತನಾಡುವುದರಲ್ಲಿಯೇ ನಾನು ಅವರು ಹಳೆ ಎಂ ಒ ಬಿ ಆಸಾಮಿಗಳು ಎಂದು ಗೊತ್ತಾಯಿತು. ಆರೋಪಿಗಳು ಎಂ ಒ ಬಿ ಆಸಾಮಿಗಳು ಎಂದು ಸ್ಥಳದಲ್ಲಿ ನಾನು ಪರಿಶೀಲಿಸಿಕೊಳ್ಳಲಿಲ್ಲ. ಅಂಗಶೋಧನೆ ಮಾಡುವ ಪೂರ್ವದಲ್ಲಿ ವಾರೆಂಟ್ ತಯಾರಿಸಿರಲಿಲ್ಲ. ಸಿಕ್ಕ ಒಡವೆಗಳನ್ನು ಅಲ್ಲೆ ಪಕ್ಕ ಇದ್ದ ಗಿರವಿ ಅಂಗಡಿಯಲ್ಲಿ ತೂಕ ಹಾಕಿಸಿದೆವು. ಚಿನ್ನದ ಒಡವೆಗಳು ಎಂದು ಮಾರ್ವಾಡಿಗಳು ತಿಳಿಸಿದರು. ತೂಕ ಹಾಕಿಸಿಕೊಂಡು ಬರಲು ಎ ಎಸ್ ಐ ವೆಂಕಟೇಶ್ ರವರು ಹೋಗಿದ್ದರು. ಈ ವಿಚಾರವನ್ನು ಇಂದೇ ಮೊದಲ ಬಾರಿಗೆ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಅಮಾನತ್ತು ಮಹಜರು ಮಾಡಿದ ಸ್ಥಳದ ಚೆಕ್ಕುಬಂದಿಯನ್ನು ಹೇಳಬಹುದು ಪೂರ್ವ ಮತ್ತು ಪಶ್ಚಿಮ ಮಹದೇವಪುರ ರಸ್ತೆ, ಉತ್ತರಕ್ಕೆ ರಸ್ತೆ ಮತ್ತು ಗೋಬರ್ ಗ್ಯಾಸ್, ದಕ್ಷಿಣಕ್ಕೆ ಪಂಕಜ್ ಪಾನ್ ಬ್ರೋಕರ್ ಅಂಗಡಿ ಇತ್ತು. ಅಮಾನತ್ತು ಮಹಜರು ಮಾಡುವಾಗ ಅಕ್ಕಪಕ್ಕ ಇದ್ದ ಜನಗಳು ಬಂದಿದ್ದರು ಹಾಗೂ ನಾವುಗಳು ಇದ್ದೆವು. ಅಮಾನತ್ತು ಮಹಜರು ಮಾಡುವಾಗ ಫೋಟೋ ತೆಗೆಸಲಿಲ್ಲ. ಗಿರವಿ ಚೀಟಿಯನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸಾಕ್ಷಿ ನಾವು ಠಾಣೆಯಲ್ಲಿ ಹಾಜರು ಪಡಿಸಿದ್ದೆವೆಂದು ಹೇಳುತ್ತಾರೆ. ಗಿರಿವಿ ಚೀಟಿಗಳು ಯಾರ ಯಾರ ಹೆಸರಿನಲ್ಲಿದ್ದವು ಎಂದು ಈಗ ಹೇಳಲು ಜ್ಞಾಪಕ ಇಲ್ಲ. ಅಮಾನತ್ತು ಮಹಜರನ್ನು ಠ್ಠಾಣೆಯಲ್ಲಿ ಕುಳಿತು ಸೃಷ್ಟಿಸಿದೆ ಎಂದರೆ ಸರಿಯಲ್ಲ. 2 ನೇ ಆರೋಪಿ ವಶದಿಂದ*

*ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ನಿಖರ ಸ್ಥಳದಿಂದ 2 ನೇ ಆರೋಪಿಯನ್ನು ನೀವು ಕರೆದುಕೊಂಡು ಬಂದಿಲ್ಲ ಎಂರದೆ ಸರಿಯಲ್ಲ. 2 ನೇ ಆರೋಪಿಗುಾ ಈ ಪ್ರಕರಣಕ್ಕು ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಗೂ ಈ ಪ್ರಕರಣಕ್ಕು ಸಂಬಂಧ ಇಲ್ಲದೇ ಇದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***<u>ಮರು ವಿಚಾರಣೆ ಇಲ್ಲ.</u>***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***